ಅ) *ಸರ್ಕಾರವು ಡಾ// ಸರೋಜಿನಿ ಮಹಿಷಿ ಸಮಿತಿಯ ಶಿಫಾರಸನ್ನು ಅಂಗೀಕರಿಸಿದೆಯೇ?*

ಆ) *ಹಾಗಿದ್ದಲ್ಲಿ ಭಾರತ ಸರ್ಕಾರದ ಅಧೀನದಲ್ಲಿರುವ ಸಾರ್ವಜನಿಕ ಉದ್ಯಮಗಳನ್ನು ಕನ್ನಡಿಗರಿಗೆ ಉದ್ಯೋಗ ಒದಗಿಸಲು ಏನು ಕ್ರಮ ಕೈಗೊಳ್ಳಲಾಗಿದೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಡಾ॥ ಸರೋಜಿನಿ ಮಹಿಷಿ ಸಮಿತಿಯು ಸಲ್ಲಿಸಿದ್ದ ವರದಿಯಲ್ಲಿರುವ ಕೆಲವು ಶಿಫಾರಸುಗಳನ್ನು ಪರಿಶೀಲಿಸಲು ನೇಮಿಸಲಾಗಿದ್ದ ಸಚಿವ ಸಂಪುಟದ ಉಪಸಮಿತಿಯು ಮಾಡಿದ ಶಿಫಾರಸುಗಳನ್ನು ಸರ್ಕಾರವು ಅಂಗೀಕರಿಸಿದೆ.

ಆ) ಈ ದಿಸೆಯಲ್ಲಿ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ.

ಕೃಷಿ ಮೇಲ್ದಂಡೆ ಯೋಜನೆ

1089 - ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷ್ಣಾ ಮೇಲ್ದಂಡೆ ಯೋಜನೆಗೆ ಇಲ್ಲಿಯವರೆಗೆ ಸಿಬ್ಬಂದಿಯ ವೆಚ್ಚವನ್ನು ಹೊರತು ಪಡಿಸಿ ಮಾಡಲಾದ ವೆಚ್ಚ ಎಷ್ಟು, ಮತ್ತು ಸಿಬ್ಬಂದಿ ಇಂಜಿನಿಯರ್ ಗಳ ವಸತಿ ಗೃಹಗಳು ಹಾಗೂ ಕಛೇರಿ ಕಟ್ಟಡಗಳಿಗೆ ಮಾಡಲಾದ ವಚ್ಚ ಎಷ್ಟು?*

ಆ) *ಸಿಬ್ಬಂದಿ ವೆಚ್ಚವನ್ನು ಹೊರತು ಪಡಿಸಿ ಇಂಡಿ ಕಾಲುವೆ ವಿಭಾಗಕ್ಕೆ ಮಾಡಿದ ವೆಚ್ಚ ಎಷ್ಟು?*

ಇ) *ವಸತಿ ಗೃಹಗಳು ಮತ್ತು ಇತರ ಕಟ್ಟಡಗಳಿಗಾಗಿ ಮಾಡಲಾದ ವೆಚ್ಚ ಎಷ್ಟು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) (i) 1991ರ ಜನವರಿ ಕೊನೆಯವರೆಗೆ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಸಿಬ್ಬಂದಿ ವೆಚ್ಚ ಹೊರತುಪಡಿಸಿ ಮಾಡಲಾದ ವೆಚ್ಚ 529.54 ಕೋಟಿ ರೂ.ಗಳು

(ii) ಸಿಬ್ಬಂದಿ ಇಂಜಿನಿಯರ್‌ಗಳ ವಸತಿ ಗೃಹಗಳು ಹಾಗೂ ಕಚೇರಿ ಕಟ್ಟಡಗಳಿಗಾಗಿ ಇದುವರೆಗೂ ಮಾಡಿದ ವೆಚ್ಚ 35.50 ಕೋಟಿ ರೂಪಾಯಿಗಳು.

ಆ) ಕಾಲುವೆ ವಲಯ ಸಂಖ್ಯೆ:2 ಪ್ರಾರಂಭವಾದಾಗಿನಿಂದ, ಅಂದರೆ 1.10.1986ರಿಂದ ಇಂಡಿ ಉಪ ಕಾಲುವೆ ಹಾಗೂ ಸಂಬಂಧಿಸಿದ ಕಾಮಗಾರಿಗಳ ನಿರ್ಮಾಣಕ್ಕಾಗಿ ಸಿಬ್ಬಂದಿ ವೆಚ್ಚ ಹೊರತುಪಡಿಸಿ ಮಾಡಲಾದ ವೆಚ್ಚ 47.67 ಕೋಟಿ ರೂ.ಗಳು

ಇ) ಇಂಡಿ ಉಪ ಕಾಲುವೆ ಹಾಗೂ ಸಂಬಂಧಿಸಿದ ಕಾಮಗಾರಿಗಳಿಗಾಗಿ ಬೇಕಾಗುವ ಸಿಬ್ಬಂದಿ ವಸತಿ ಗೃಹಗಳು ಮತ್ತು ಕಛೇರಿ ಕಟ್ಟಡಗಳ ನಿರ್ಮಾಣಕ್ಕಾಗಿ ಮಾಡಿದ ವೆಚ್ಚ 8.57 ಕೋಟಿ ರೂ.ಗಳು

ಬಿಜಾಪುರ ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಬೆಳವಣಿಗೆ

1091 - ಶ್ರೀ ಮನೋಹರ ಐನಾಪುರ (ಬಳ್ಳೋಳ್ಳಿ) : ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬಿಜಾಪುರ ಜಿಲ್ಲೆ ಸದಾ ಬರಗಾಲ ಪ್ರದೇಶ ಎಂಬುದು ನಿಜವೇ?

2) ಹಾಗಾದರೆ ರೇಷ್ಮೆ ಕೃಷಿಯನ್ನು ಹೆಚ್ಚಿಸಲು ಬರಗಾಲ ಜಿಲ್ಲೆಯಾದ ಬೆಳಗಾಂನಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) :

1) ಬಿಜಾಪುರ ಜಿಲ್ಲೆಯ ಕೆಲವೊಂದು ಭಾಗಗಳಲ್ಲಿ ಕೆಲವೊಂದು ವರ್ಷಗಳಲ್ಲಿ ಬರಗಾಲಕ್ಕೆ ಈಡಾಗಿದೆ.

2)ಹಿಪ್ಪನೇರಳೆ ವ್ಯವಸಾಯವನ್ನು ನೀರಾವರಿ ಪ್ರದೇಶದಲ್ಲಿ ಕೈಗೊಳ್ಳಲಾಗಿದೆ. ನೀರಾವರಿ ಬಾವಿ ಅಥವಾ ನಾಲೆಯದಾಗಿರಬಹುದು. ಈವಾಗ ಹಿಪ್ಪನೇರಳೆ ವ್ಯವಸಾಯವನ್ನು 'ವಾಟರ್ ರೆಡ್' ಪ್ರದೇಶಗಳಲ್ಲಿ ತೆಗೆದುಕೊಳ್ಳಲಾಗುತ್ತಿದೆ.

ಬೆಳಗಾಂ ಜಿಲ್ಲೆಯಲ್ಲಿ ರೇಷ್ಮೆ ಕೃಷಿಯನ್ನು ಹೆಚ್ಚಿಸಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1. ರೇಷ್ಮೆ ಕೃಷಿ ತೋಟಗಳ ಸ್ಥಾಪನೆ : ಇದರಿಂದ ರೈತರಿಗೆ ಹಿಪ್ಪನೇರಳೆ ಕಡ್ಡಿ ಮತ್ತು ಸಸಿಗಳನ್ನು ಒದಗಿಸಬಹುದು. ಇದರಿಂದ ರೈತರಿಗೆ ತೋಟದ ಮತ್ತು ಹುಳು ಸಾಕಾಣಿಕೆ ನಿರ್ವಹಣೆಯ ಬಗ್ಗೆ ತರಬೇತಿ ಕೊಡುವುದು.

2. ತಾಂತ್ರಿಕ ಸಲಹೆಗಳನ್ನು ಕೊಡಲು ತಾಂತ್ರಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸುವುದು.

3. ಚಾಕಿ ಹುಳು ಸಾಕಾಣಿಕೆಯನ್ನು ಸರಿಯಾಗಿ ಸಾಕಲು ಚಾಕಿ ಸಾಕಾಣಿಕೆ ಕೇಂದ್ರಗಳನ್ನು ಸ್ಥಾಪಿಸಿರುವುದು.

4. ರೇಷ್ಮೆ ಗೂಡಿನ ಮಾರಾಟಕ್ಕೆ ಸೌಲಭ್ಯ ಕಲ್ಪಿಸಲು ಮಾರುಕಟ್ಟೆ ಸ್ಥಾಪಿಸಲಾಗಿದೆ.

5. ನೂಲು ಬಿಚ್ಚಾಣಿಕೆ ಘಟಕವನ್ನು ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ತರಬೇತು ನೀಡಲು ಸ್ಥಾಪಿಸಲಾಗಿದೆ.

6. ರೇಷ್ಮೆ ಕೃಷಿಕರಿಗೆ ರೇಷ್ಮೆ ಮೊಟ್ಟೆಗಳನ್ನು ತಯಾರಿ ಸರಬರಾಜು ಮಾಡಲು ರೇಷ್ಮೆ ಬಿತ್ತನೆ ಕೋಠಿಯನ್ನು ಸ್ಥಾಪಿಸಲಾಗಿದೆ

ಹಣಕಾಸು ಸಂಸ್ಥೆಗಳಿಂದ ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಹೂಡಿರುವ ಹಣ

1103 - ಶ್ರೀ ಎಸ್. ಶಫಿ ಅಹಮದ್ (ತುಮಕೂರು) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇರೆ ಬೇರೆ ಹಣಕಾಸು ಸಂಸ್ಥೆಗಳಿಂದ ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ತೊಡಗಿಸಿದ ಒಟ್ಟು ಬಂಡವಾಳ ಎಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಎಷ್ಟು ಸಣ್ಣ ಪ್ರಮಾಣದ ಕೈಗಾರಿಕೆಗಳು ರೋಗಗ್ರಸ್ಥವಾಗಿವೆ ಮತ್ತು ಇದಕ್ಕೆ ಕಾರಣಗಳೇನು?

ಇ) ಸರ್ಕಾರದಿಂದ ಇವುಗಳನ್ನು ಸುಸ್ಥಿತಿಗೆ ತರಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು): ಅ) ಕೆ.ಎಸ್.ಎಫ್.ಸಿ., ಬ್ಯಾಂಕುಗಳು ಇತ್ಯಾದಿ ಹಣಕಾಸು ಸಂಸ್ಥೆಗಳು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಾಲವನ್ನು ನೀಡುತ್ತವೆ. ಆದರೆ ಅವುಗಳಲ್ಲಿ ಬಂಡವಾಳ ಹೂಡುವುದಿಲ್ಲ. ಆದುದರಿಂದ ಹಣಕಾಸು ಸಂಸ್ಥೆಗಳು ಸಣ್ಣ ಪ್ರಮಾಣದ ಕೈಗಾರಿಕೆಗಳ ಮೇಲೆ ಬಂಡವಾಳ ಹೂಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) 1,621 ಘಟಕಗಳನ್ನು ರೋಗಗ್ರಸ್ಥವೆಂದು ಪರಿಗಣಿಸಲಾಗಿದೆ. ಇದಕ್ಕೆ ಕಾರಣಗಳು ಈ ರೀತಿ ಇವೆ.

- ದುರಾಡಳಿತ
- ದುಡಿಯುವ ಬಂಡವಾಳ ಕೊರತೆ
- ಮಾರುಕಟ್ಟೆ ಸಮಸ್ಯೆಗಳು
- ಕೆಲಸಗಾರರ ಸಮಸ್ಯೆಗಳು